# ಕರ್ನಾಟಕವಿಧಾನಪರಿಷತ್ತು

| | |
|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | 897 |
| ಮಾನ್ಯ ಸದಸ್ಯರ ಹೆಸರು | ಡಾ|| ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 15-12-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಆಯುಷ್ ಇಲಾಖೆಯಲ್ಲಿ ಗುತ್ತಿಗೆ ತಜ್ಞ ವೈದ್ಯರುಗಳ ವೇತನ ಅಲೋಪಥಿ ಗುತ್ತಿಗೆ ತಜ್ಞವೈದ್ಯರ ಜೊತೆ ಹೋಲಿಸಿದರೆ ಕಡಿಮೆ ಇದೆ ಯಾವ ಕಾರಣದಿಂದ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುತ್ತಿಲ್ಲ; | ರಾಷ್ಟ್ರೀಯ ಆಯುಷ್ ಅಭಿಯಾನದಡಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರ ವೇತನವನ್ನು ರಾಷ್ಟ್ರೀಯ ಆಯುಷ್ ಅಭಿಯಾನದ Executive Committee ಮತ್ತು ಭಾರತ ಸರ್ಕಾರದ ಆಯುಷ್ ಮಂತ್ರಾಲಯ ಅನುಮೋದನೆಯೊಂದಿಗೆ ರಾಜ್ಯ ಸರ್ಕಾರದ 6ನೇ ವೇತನ ಆಯೋಗದ ಮೂಲ ವೇತನದಲ್ಲಿ ರೂ.100/- ಕಡಿತಗೊಳಿಸಿ ರೂ.52,550/- ಗಳನ್ನು +ಸ್ನಾತಕೋತ್ತರ ಭತ್ಯೆಯೊಂದಿಗೆ ಮಾಹೆಯಾನ ವೇತನ ಪಾವತಿಸಲಾಗುತ್ತಿದೆ. |
| ಆ) | ಆಯಷ್ ಗುತ್ತಿಗೆ ತಜ್ಞವೈದ್ಯರು ನೈಜ ಶೈಕ್ಷಣಿಕ ಅರ್ಹತೆ ಸ್ನಾತಕೋತ್ತರ ಪದವಿ ಹಾಗೂ ವಿವಿಧ ವಿಷಯಗಳ ಮೇಲೆ ಮೂರು ವರ್ಷಗಳ ಸಂಶೋಧನಾ ಅನುಭವ ಮತ್ತು ತಜ್ಞತೆ ಆಧಾರದ ಮೇಲೆ ಸಾರ್ವಜನಿಕರ ಸೇವೆ ನೀಡುತ್ತಿದ್ದರೂ ಯಾವ ಮಾನದಂಡದ ಆಧಾರದ ಮೇಲೆ ವೇತನ ನೀಡದಿರುವುದು ಮತ್ತು ಏಕೆ ಅಲೋಪಥಿ ತಜ್ಞವೈದ್ಯರ ಸಮಾನವಾಗಿ ವೇತನ ತರುವ ಕುರಿತು ಯಾವ ಕ್ರಮಕೈಗೊಳ್ಳುತ್ತಿದೆ; | ಆಯುಷ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಡಿ ತಜ್ಞವೈದ್ಯರ ಹುದ್ದೆಗಳು ಸೃಜನೆಯಾಗಿರುವುದಿಲ್ಲ.<br><br>ಮುಂದುವರೆದು, ರಾಷ್ಟ್ರೀಯ ಆಯುಷ್ ಅಭಿಯಾನದಡಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ತಜ್ಞವೈದ್ಯರ ಹುದ್ದೆಗಳನ್ನು ಸೃಜನೆ ಮಾಡಲಾಗಿರುತ್ತದೆ. ತಜ್ಞ ವೈದ್ಯರ ವೇತನವನ್ನು ರಾಷ್ಟ್ರೀಯ ಆಯುಷ್ ಅಭಿಯಾನದ Executive Committee ಮತ್ತು ಭಾರತ ಸರ್ಕಾರದ ಆಯುಷ್ ಮಂತ್ರಾಲಯ ಅನುಮೋದನೆಯೊಂದಿಗೆ ರಾಜ್ಯ ಸರ್ಕಾರದ 6ನೇ ವೇತನ ಆಯೋಗದಡಿ ಆಯುಷ್ ವೈದ್ಯರಿಗೆ ನಿಗದಿಪಡಿಸಲಾದ ವೇತನದಂತೆ ಪಾವತಿಸಲಾಗುತ್ತಿದೆ<br><br>ಅಲೋಪಥಿ ತಜ್ಞ ವೈದ್ಯರಿಗೆ ನೀಡುವ ವೇತನದಂತೆ ಆಯುಷ್ ತಜ್ಞ ವೈದ್ಯರಿಗೂ ಸಮಾನವಾಗಿ ವೇತನ ನೀಡುವ ಕುರಿತ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

| | | |
|---|---|---|
| ಇ) | ಆಯುಷ್ ತಜ್ಞ ವೈದ್ಯರು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ರೋಗಿಗಳ ವಿವಿಧ (ಕ್ಲಿನಿಕಲ್) ಅಗತ್ಯಗಳಿಗೆ, ಶಸ್ತ್ರಚಿಕಿತ್ಸೆ, ಅನುಷಸ್ತ್ರ, ಪಂಚಕರ್ಮ ಮತ್ತು ಇತರೆ ಪ್ರೊಸೀಜರ್‌ಗಳಲ್ಲಿ ಸೇವೆ ನೀಡುತ್ತಿದ್ದು ಇಂತಹ ಸೇವೆಗಳ ಮಹತ್ವವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸಮಾನ ವೇತನ ನೀಡುವ ಕುರಿತು ಯಾವ ಕ್ರಮಕೈಗೊಳ್ಳುತ್ತಿದೆ; | ಅಲೋಪಥಿ ತಜ್ಞ ವೈದ್ಯರಿಗೆ ನೀಡುವ ವೇತನದಂತೆ ಆಯುಷ್ ತಜ್ಞ ವೈದ್ಯರಿಗೂ ಸಮಾನವಾಗಿ ವೇತನ ನೀಡುವ ಕುರಿತ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ರಾಜ್ಯ ಸರ್ಕಾರ ಆಯುಷ್ ಇಲಾಖೆಯ ಗುತ್ತಿಗೆ ತಜ್ಞ ವೈದ್ಯರಿಗೆ, ಅಲೋಪಥಿ ಗುತ್ತಿಗೆ ತಜ್ಞವೈದ್ಯರು ಪಡೆಯುತ್ತಿರುವಂತೆ ಪ್ರತಿ ತಿಂಗಳು ರೂ.1,30,000/- ಸಮಾನ ವೇತನವನ್ನು ಕಾನೂನಾತ್ಮಕವಾಗಿ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | |

**ಸಂಖ್ಯೆ: ಆಕುಕ 453ಪಿಟಿಡಿ 2025**

**(ದಿನೇಶ್‌ಗುಂಡೂರಾವ್)**
ಆರೋಗ್ಯಮತ್ತುಕುಟುಂಬಕಲ್ಯಾಣಸಚಿವರು